# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು, ಬೆಂಗಳೂರು-560 002

ಸಂಖ್ಯೆ: ಬಿ12(ಸಿ1)/ಸಿಜಿ/ಪಿಆರ್/ 83 /2023-24 ದಿನಾಂಕ: 18.1.24

Eoffice No.38625

## ನೇಮಕಾತಿ ಆದೇಶ

ವಿಷಯ: ದಿವಂಗತ ಶ್ರೀ ಮುನಿಯಪ್ಪ, ಪೌರಕಾರ್ಮಿಕರು ರವರ ಮಗನಾದ ಶ್ರೀ ರವಿಕುಮಾರ್.ಎಂ ರವರನ್ನು ಅನುಕಂಪದ ಆಧಾರದ ಮೇಲೆ ಪೌರಕಾರ್ಮಿಕರು ಹುದ್ದೆಗೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಡಿಪಿಎಆರ್ 100 ಎಸ್‌ಸಿವಿ 95, ದಿ: 12-09-96.
2) ಸದರಿ ಅರ್ಜಿದಾರರ ಮನವಿ ಪತ್ರದ ದಿನಾಂಕ:-05-10-2020
3) ಪೊಲೀಸ್ ಇನ್ಸ್ ಪೆಕ್ಟರ್, ನಗರ ವಿಶೇಷ ಶಾಖೆ ಆಡಳಿತ, ಪೊಲೀಸ್ ಕಮೀಷನರ್ ರವರ ಪರವಾಗಿ ಬೆಂಗಳೂರು ನಗರ, ರವರ ದೃಢೀಕರಣ ಪತ್ರ ದಿ:20-06-2022
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ-ಹೆಬ್ಬಾಳ) ವಿಭಾಗ ರವರ ಮಹಜರ್ ವರದಿ
5) ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗ ರವರ ಮಹಜರ್ ವರದಿ ದಿ:14-09-2022
6) ಜಂಟಿ ಆಯುಕ್ತರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ದಿ:11-08-2023 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.
7) ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿ:16-10-2023 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.



--------

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ಕೋರಿ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಿ, ಜಂಟಿ ಆಯುಕ್ತರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 11-08-2023 ರಂದು ನಡೆದ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಮತ್ತು ಚರ್ಚಿಸಿ, ತೆಗೆದುಕೊಂಡಿರುವ ತೀರ್ಮಾನದಂತೆ, ಶ್ರೀ ಮುನಿಯಪ್ಪ, ಪೌರಕಾರ್ಮಿಕರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ- ಹೆಬ್ಬಾಳ) ವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಮೃತರಾಗಿದ್ದು, ನಿಯಮದಂತೆ ಸದರಿಯವರ ಮಗನಾದ ಶ್ರೀ ರವಿಕುಮಾರ್.ಎಂ 9ನೇ ತರಗತಿ ವಿದ್ಯಾರ್ಹತೆ ಹೊಂದಿರುವುದರಿಂದ ಗ್ರೂಫ್ 'ಡಿ' ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:16-10-2023 ರಂದು ನಡೆದ ಅನುಕಂಪದ ಆಧಾರದ ಮೇಲೆ ನೇಮಕಾತಿ ಅಂತಿಮ ಪರಿಶೀಲನಾ ಸಮಿತಿ ಸಭೆಯಲ್ಲಿ ಶ್ರೀ ರವಿಕುಮಾರ್.ಎಂ ರವರನ್ನು ಗ್ರೂಫ್ 'ಡಿ' ಹುದ್ದೆಯಾದ ಪೌರಕಾರ್ಮಿಕರು ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ. ಸದರಿ ಸಮಿತಿಯ ತೀರ್ಮಾನದ ನಡವಳಿಯನ್ನು ನೇಮಕಾತಿ ಪ್ರಾಧಿಕಾರಿಯಾದ ಮಾನ್ಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಅನುಮೋದಿಸಿರುತ್ತಾರೆ.

ಶ್ರೀ ರವಿಕುಮಾರ್.ಎಂ ಬಿನ್ ದಿವಂಗತ ಶ್ರೀ ಮುನಿಯಪ್ಪ ರವರ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | | |
|---|---|---|
| 1. | ಹೆಸರು | ಶ್ರೀ ರವಿಕುಮಾರ್.ಎಂ |
| 2. | ಜನ್ಮ ದಿನಾಂಕ | 16-12-1992 ಶಾಲಾ ವರ್ಗಾವಣಾ ಪ್ರಮಾಣ ಪತ್ರದಲ್ಲಿರುವಂತೆ |
| 3. | ವಿಳಾಸ | No.164, Link Road, Gangabhavani Layout, Chinnappa Garden, Benson Town Bangalore - 560046 |
| 4. | ಪ್ರವರ್ಗ | ಪರಿಶಿಷ್ಟ ಜಾತಿಗಳು (ಆದಿ ಕರ್ನಾಟಕ) (ದಿನಾಂಕ:03-08-2022 ರಂದು ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ವಿತರಿಸಿರುವ ಜಾತಿ ಪ್ರಮಾಣ ಪತ್ರ) |

ಉಲ್ಲೇಖ-(1)ರ ಸರ್ಕಾರಿ ಆದೇಶದ ಅನ್ವಯ ಹಾಗೂ ಉಲ್ಲೇಖ-(2) ರಿಂದ (5)ರ ವರೆಗಿನ ದಾಖಲಾತಿಗಳು ಮತ್ತು ವರದಿಗಳನ್ನಾಧರಿಸಿ ಉಲ್ಲೇಖ-(6) ಮತ್ತು (7)ರ ಸಭೆ ನಡವಳಿಗಳ ತೀರ್ಮಾನದಂತೆ, ಸದರಿಯವರನ್ನು ಅನುಕಂಪದ ಆಧಾರದ ಮೇಲೆ ವೇತನ ಶ್ರೇಣಿ ರೂ.17000-28950ರಲ್ಲಿ ಗ್ರೂಪ್ "ಡಿ" ದರ್ಜೆಯಲ್ಲಿ ಪೌರಕಾರ್ಮಿಕರು ಹುದ್ದೆಗೆ ಈ ಕೆಳಕಂಡ ಷರತ್ತಿಗಳಿಗೊಳಪಡಿಸಿ ನೇಮಕಾತಿ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಖಾಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ-ಪುಲಕೇಶಿನಗರ) ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

ಪು.ತಿ.ನೊ........

**ಷರತ್ತುಗಳು**

1) ಶ್ರೀ ರವಿಕುಮಾರ್.ಎಂ ಬಿನ್ ದಿವಂಗತ ಶ್ರೀ ಮುನಿಯಪ್ಪ ಇವರು ಪೌರಕಾರ್ಮಿಕರು ಹುದ್ದೆಗೆ ಈ ಪತ್ರ ತಲುಪಿದ 7 ದಿವಸಗಳೊಳಗಾಗಿ, ದೇಹದಾರ್ಢ್ಯತೆ ಪತ್ರ, ಶಾಲಾ ವರ್ಗಾವಣೆ / ಜನನ ಪ್ರಮಾಣ ಪತ್ರ ಮತ್ತು ಇತರೇ ಮೂಲ ದಾಖಲಾತಿಗಳೊಂದಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ- ಪುಲಕೇಶಿನಗರ) ರವರ ಬಳಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

2) ಈ ನೇಮಕಾತಿಯು 1977ರ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಯಂತೆ 2 ವರ್ಷಗಳ ಪರೀಕ್ಷಾರ್ಥ ಅವಧಿಗೆ ಒಳಪಟ್ಟಿರುತ್ತದೆ. ಈ ಅವಧಿಯಲ್ಲಿ ತೃಪ್ತಿಕರ ಸೇವೆ ಸಲ್ಲಿಸಿ, ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳುವುದು.

3) ಸದರಿಯವರು ಷರತ್ತು 2ನ್ನು ಪರೀಕ್ಷಾರ್ಥ ಅವಧಿ ಪೂರೈಸದಿದ್ದಲ್ಲಿ 1977ರ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಗಳ ನಿಯಮ 5(1)(ಬಿ) ರನ್ವಯ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲಾಗುವುದೆಂದು ತಿಳಿಯುವುದು.

4) ಈ ನೇಮಕಾತಿಯನ್ನು ಪಡೆಯಲು ಅಭ್ಯರ್ಥಿಯು ಯಾವುದಾದರೂ ನಕಲು ಇಲ್ಲವೇ ಫೋರ್ಜರಿ ದಾಖಲಾತಿಗಳನ್ನು ಅಥವಾ ಸುಳ್ಳು ಮಾಹಿತಿಯನ್ನು ಸಲ್ಲಿಸಿರುವುದು ದೃಢಪಟ್ಟಲ್ಲಿ 2020ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಅಧಿಕಾರಿ ಮತ್ತು ನೌಕರರುಗಳ ಸಾಮಾನ್ಯ ವೃಂದ ಮತ್ತು ನೇಮಕಾತಿ) ನಿಯಮಗಳು, 1977ರ ಸಾಮಾನ್ಯ ನೇಮಕಾತಿ ನಿಯಮಾವಳಿ ನಿಯಮ (20), 1977ರ ಕರ್ನಾಟಕ ಮುನಿಸಿಪಲ್ ನಿಯಮಾವಳಿ ನಿಯಮ (25)ರ ರೀತ್ಯಾ ನೇಮಕಾತಿ ಹೊಂದುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ನಗರ ಪಾಲಿಕೆಗೆ ವಂಚಿಸಿರುತ್ತಾರೆಂದು ಭಾವಿಸಿ, 1957ರ ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಯ ನಿಯಮ 11ರ ರೀತಿ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು ಹಾಗೂ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದೆಂದು ತಿಳಿಯುವುದು.

5) ಪಿಂಚಣಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31-03-2006 ರಂತೆ, ಎನ್.ಪಿ.ಎಸ್ ಅರ್ಹರಿರುತ್ತೀರಿ.

6) ಸದರಿಯವರು ಅಗತ್ಯ ದಾಖಲೆಗಳನ್ನು ಕೂಡಲೇ ಒದಗಿಸಿ ನೂತನ ಪಿಂಚಣಿ ಯೋಜನೆಯಲ್ಲಿ ನೊಂದಾಯಿಸಲು ಸೂಚಿಸಿದೆ ಹಾಗೂ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು PRAN ಸಂಖ್ಯೆ ಸೃಜಿಸಲು ಹಾಗೂ ಕಟಾವಣೆಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ/ಹಣಕಾಸು/ ಪೂರ್ವ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ- ಪುಲಕೇಶಿನಗರ) ಕಛೇರಿಗೆ ಅಭ್ಯರ್ಥಿಯ ಭಾವಚಿತ್ರದೊಂದಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ- ಹೆಬ್ಬಾಳ) ವಿಭಾಗ ರವರಿಗೆ ಮೃತ ನೌಕರರ ಸೇವಾ ಪುಸ್ತಕದೊಂದಿಗೆ ಕಳುಹಿಸಿದೆ.
: ಸಹಾಯಕ ಆಯುಕ್ತರು, ನೇಮಕಾತಿ ವಿಭಾಗ ರವರಿಗೆ ಕಳುಹಿಸಿದೆ.
: ಮು.ಲೆ.ಅ/ಮು.ಲೆ.ಪ/ಉ.ನಿ. (ಹಣಕಾಸು- ಪೂರ್ವ) ರವರಿಗೆ ಕಳುಹಿಸಿದೆ.
: ನಿರ್ದೇಶಕರು (ಮಾಹಿತಿ ಮತ್ತು ತಂತ್ರಜ್ಞಾನ) ಹಾಗೂ ಉಪ ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಅಭ್ಯರ್ಥಿಗೆ / ಕಛೇರಿ ಕಡತಕ್ಕೆ.

20/1/2024

7829298179